# ಅವಕಾಶ ವಂಚಿತ ಮಕ್ಕಳಿಗೆ ಡಿಜಿಟಲ್ ಶಿಕ್ಷಣ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಪರಿಕ್ರಮ ಹ್ಯುಮ್ಯಾನಿಟಿ ಫೌಂಡೇಷನ್ ಎನ್‌ಜಿಒ ಅವಕಾಶ ವಂಚಿತ ಮಕ್ಕಳಿಗಾಗಿ ನಡೆಸುತ್ತಿರುವ ಶಾಲೆಗಳಲ್ಲಿ ಸೀಡ್ (ಸಿಇಇಡಿ) ತಂತ್ರಜ್ಞಾನ ಆಧಾರಿತ ಕಲಿಕಾ ವಿಧಾನವನ್ನು ಅಳವಡಿಸಿದೆ.

ಸಿಸ್ಕೋ ಸಂಸ್ಥೆಯ ಸಹಯೋಗದೊಂದಿಗೆ ಮೊದಲ ಬಾರಿ ಪರಿಕ್ರಮ ಹ್ಯುಮ್ಯಾನಿಟಿ ಫೌಂಡೇಷನ್ ಕೋರಮಂಗಲ, ಸಹಕಾರ ನಗರ, ಜಯನಗರ ಮತ್ತು ನಂದಿನಿ ಲೇಔಟ್‌ನ ಶಾಲೆಗಳಲ್ಲಿ ಅಳವಡಿಸಲಾಗಿರುವ ಕೇಂದ್ರೀಕೃತ ಸೀಡ್ ತಂತ್ರಜ್ಞಾನ ಆಧಾರಿತ ಕಲಿಕಾ ವಿಧಾನಕ್ಕೆ ಮಂಗಳವಾರ ಅಧಿಕೃತ ಚಾಲನೆ ದೊರೆಯಿತು.

ಮೊದಲ ದಿನ ನಾಲ್ಕೂ ಶಾಲೆಗಳ ಮಕ್ಕಳಿಗಾಗಿ ವೀಡಿಯೋ ಕಾನ್ಫರೆನ್ಸ್ ಮೂಲಕ 'ಸ್ಪೆಲ್ಲಿಂಗ್ ಬೀ' ಸ್ಪರ್ಧೆ ಆಯೋಜಿಸಲಾಗಿತ್ತು. ಜಯನಗರ ಶಾಲೆ ಯಿಂದ ಶಿಕ್ಷಕರು ಕೇಳಿದ ಪ್ರಶ್ನೆಗೆ ಉಳಿದ ಶಾಲೆಗಳ ಮಕ್ಕಳು ಉತ್ತರಿಸುವಲ್ಲಿ ಯಶಸ್ವಿಯಾದರು. ಅಂತಿಮವಾಗಿ ಕೋರಮಂಗಲ ಶಾಲಾ ಮಕ್ಕಳು ಸ್ಪರ್ಧೆಯಲ್ಲಿ ವಿಜೇತರಾದರು.



ಪರಿಕ್ರಮ ಹ್ಯುಮ್ಯಾನಿಟಿ ಫೌಂಡೇಷನ್ ನೂತನವಾಗಿ ಆರಂಭಿಸಿರುವ ಸೀಡ್ ತಂತ್ರಜ್ಞಾನ ಆಧಾರಿತ ಕಲಿಕಾ ವಿಧಾನವನ್ನು ಮಂಗಳವಾರ ಶಾಲಾ ಮಕ್ಕಳಿಗಾಗಿ ವೀಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಲಾಯಿತು. ಸಾರ್ಕ್ ಇಂಡಿಯಾ ಅಧ್ಯಕ್ಷ ದಿನೇಶ್ ಮಲ್ಕಾನಿ, ಹ್ಯುಮ್ಯಾನಿಟಿ ಫೌಂಡೇಷನ್‌ನ ಶೈಕ್ಷಣಿಕ ಆಡಳಿತ ವಿಭಾಗದ ಮುಖ್ಯಸ್ಥೆ ಕಲ್ಪನಾ ಸಿಂಗ್ ಮತ್ತು ಸಿಬ್ಬಂದಿ ಇದ್ದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಪರಿಕ್ರಮ ಹ್ಯುಮ್ಯಾನಿಟಿ ಫೌಂಡೇಷನ್ ಸಿಇಒ ಶುಕ್ಲಾ ಬೋಸ್, ತಂತ್ರಜ್ಞಾನಕ್ಕೆ ಆದ್ಯತೆ ಹೆಚ್ಚುತ್ತಿರುವ ಈ ದಿನಗಳಲ್ಲಿ ಅವಕಾಶ ವಂಚಿತ, ಕೊಳೆಗೇರಿ ಪ್ರದೇಶದ ಮಕ್ಕಳಿಗೂ ತಂತ್ರಜ್ಞಾನ ಆಧಾರಿತ ಗುಣಮಟ್ಟದ ಶಿಕ್ಷಣ ನೀಡುವುದು ನಮ್ಮ ಉದ್ದೇಶ. ಇದು ಮಕ್ಕಳಲ್ಲಿನ ಆತ್ಮವಿಶ್ವಾಸ, ಜ್ಞಾನ ವೃದ್ಧಿಸಿಕೊಳ್ಳಲು ಸಹಕಾರಿ ಎಂದು ಹೇಳಿದರು.

ಪರಿಕ್ರಮ ಹ್ಯುಮ್ಯಾನಿಟಿ ಫೌಂಡೇಷನ್‌ನ ಶೈಕ್ಷಣಿಕ ಆಡಳಿತ ವಿಭಾಗದ ಮುಖ್ಯಸ್ಥೆ ಕಲ್ಪನಾ ಸಿಂಗ್ ಮತ್ತು ಸಿಬ್ಬಂದಿ ಇದ್ದರು.